ಓ:ಎಸ್:ನಂ.250/2015

ಪಿ.ಡಬ್ಲ್ಯೂ:-1

***ದಿ:22-01-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು***

***ಪಾಟೀ ಸವಾಲು: ಪ್ರತಿವಾದಿ ಪರ ಶ್ರೀಮತಿ ಹೆಚ್ ವಿ ಎಂ ವಕೀಲರಿಂದ***

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ವಯಸ್ಸು ನನಗೆ ಗೊತ್ತಿರುವುದಿಲ್ಲ. ನಾನು ಎಂ ಸಿ ಹಳ್ಳಿಗೆ *2000* ನೇ ಇಸವಿಯಲ್ಲಿ ಬಂದಿರುತ್ತೇವೆ. ಅದಕ್ಕೂ ಪೂರ್ವದಲ್ಲಿ ನಾನು ಎನ್ ಆರ್ ಪುರ ತಾಲೂಕಿನ ಹೆಬ್ಬೆ ಗ್ರಾಮದಲ್ಲಿ ನಾನು ಹುಟ್ಟಿದ ಮನೆಯಲ್ಲಿ ವಾಸವಾಗಿದ್ದೆ. ಹೆಬ್ಬೆ ಗ್ರಾಮದಲ್ಲಿ ನನಗೆ ಮನೆ ಇರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರಸ್ತುತ ದಾವೆಯನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಅಂಶಗಳು ನನಗೆ ಗೊತ್ತಿದ್ದು, ಅವು ಸತ್ಯ ಇರುತ್ತದೆ. ವಾದಪತ್ರದ *7*ನೇ ಖಂಡಿಕೆಯಲ್ಲಿ ನಾನು ಹೆಬ್ಬೆ ಗ್ರಾಮದಲ್ಲಿ ನಮಗೆ ಮನೆ ಇರಲಿಲ್ಲ, ನಾನು ನಮ್ಮ ಅಜ್ಜಿಯ ಮನೆಯಲ್ಲಿ ವಾಸವಾಗಿರುತ್ತೇನೆಂದು ತಿಳಿಸಿರುತ್ತೇನೆಂದರೆ ಸಾಕ್ಷಿಯು ನಮ್ಮದೇ ಪ್ರತ್ಯೇಕ ಮನೆ ಇದ್ದು, ಅದರಲ್ಲಿ ನಾನು ವಾಸವಾಗಿದ್ದೆನು, ನಮಗೆ ಒಂದೊಂದು ಎಕರೆ ಜಮೀನು ನೀಡಿರುತ್ತಾರೆಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ನಾನು ಸಲ್ಲಿಸಿರುವ ದಾಖಲೆಗಳು ನನ್ನ ಅಜ್ಜಿಯಾದ ಭದ್ರಮ್ಮನಿಗೆ ಸೇರಿದ್ದವು ಎಂದರೆ ಸರಿಯಲ್ಲ.

ನನಗಿಂತಲೂ ಪೂರ್ವದಲ್ಲಿ ನನ್ನ ಅಜ್ಜಿ ಭದ್ರಮ್ಮ ಹೆಬ್ಬೆ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿ. ಅವರ ಹೆಸರಿಗೆ ಮನೆ ಇತ್ತು ಎಂದರೆ ಸರಿಯಲ್ಲ. ನಾನು ಹೆಬ್ಬೆ ಗ್ರಾಮದಲ್ಲಿ ವಾಸವಾಗಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆಂದು ನುಡಿಯುತ್ತಾರೆ. ನಾನು ಹೆಬ್ಬೆ ಗ್ರಾಮದಲ್ಲಿ ವಾಸವಾಗಿದ್ದಾಗ ಮತದಾನ ಮಾಡಿದ್ದೇನೆಂದರೆ ಸರಿ. ಪಡಿತರ ಪಡೆದಿದ್ದೇನೆಂದರೆ ಸರಿ. ನಾನು ಹೆಬ್ಬೆ ಗ್ರಾಮದಲ್ಲಿ ವಾಸವಾಗಿರುವ ಬಗ್ಗೆ ಮನೆಯ ರಶೀದಿಗಳು ನನ್ನ ಬಳಿ ಇರುತ್ತವೆ. ನಾನು ಎಂ ಸಿ ಹಳ್ಳಿಯಲ್ಲಿ ವಾಸವಾಗಿರುವ ಬಗ್ಗೆ ಮಾತ್ರ ದಾಖಲೆಗಳನ್ನು ಹಾಜರುಪಡಿಸಿದ್ದು, ಹೆಬ್ಬೆ ಗ್ರಾಮದಲ್ಲಿ ವಾಸವಾಗಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಎಂದೂ ಸಹ ಹೆಬ್ಬೆ ಗ್ರಾಮದಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ಅಲ್ಲಿ ನನಗೆ ಸ್ವಂತ ಮನೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಹೆಂಡತಿ ಹಾಗೂ ನನ್ನ ತಮ್ಮ, ಹೆಬ್ಬೆ ಗ್ರಾಮದ ನಮ್ಮ ಅಜ್ಜಿಯ ಮನೆಯಲ್ಲಿಯೇ ವಾಸವಾಗಿದ್ದೆವು ಎಂದರೆ ಸರಿಯಲ್ಲ. ನನ್ನ ಅಜ್ಜಿ ಭದ್ರಮ್ಮನ ಗಂಡನ ಹೆಸರು ಸಿದ್ರಾಮಪ್ಪ ಆಗಿರುತ್ತದೆ.

ನನ್ನ ಅಜ್ಜಿ ಭದ್ರಮ್ಮನಿಗೆ ಸಿದ್ದಪ್ಪ, ಗಂಗಪ್ಪ ಎಂದು ಎರಡು ಗಂಡು ಮಕ್ಕಳಿದ್ದು, ದೇವಮ್ಮ, ಬೋಬಮ್ಮ, ನಿಂಗಮ್ಮ, ಪುಟ್ಟಮ್ಮ ಎಂದು ಹೆಣ್ಣು ಮಕ್ಕಳಿರುತ್ತಾರೆಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ನನ್ನ ದೊಡ್ಡಮ್ಮ ಬೋಬಮ್ಮ ಜೀವಂತವಾಗಿದ್ದು, ಪುಟ್ಟಮ್ಮ, ಗಂಗಮ್ಮ, ನಿಂಗಮ್ಮ ತೀರಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಭದ್ರಮ್ಮನ ಆಸ್ತಿಗೆ ಅವರ ಮಕ್ಕಳು ವಾರಸುದಾರರು ಎಂದರೆ ಸರಿ. ಪ್ರತಿವಾದಿ ನನಗೆ ತಮ್ಮನಾಗಬೇಕು. ಪ್ರತಿವಾದಿ ಎಂ ಸಿ ಹಳ್ಳಿಯಲ್ಲಿ ವಾಸವಾಗಿರುತ್ತಾರೆ. ನನ್ನ ತಂದೆ ಹೆಸರು ನಿಂಗಪ್ಪ ಎಂದು ಇರುತ್ತದೆ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯ್ತು)

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

*ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು*

*ಪ್ರ.ದ.ನ್ಯಾ.ದಂ.ರವರು,ತರೀಕೆರೆ.*